560 10137

## ಪ್ರಥಮ ಸೆಮಿಸ್ಟರ್ ಬಿ.ಎ. ಪರೀಕ್ಷೆ, ಡಿಸೆಂಬರ್ 2018
## ಐಚ್ಛಿಕ ಕನ್ನಡ ಪತ್ರಿಕೆ – I (ಫ್ರೆಶರ್ಸ್)
## ಭಾಷಾ ಪಥ್ಯ

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 100

I. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ಚಂಪೂ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ.

2) ಶಾಸನ ಸಾಹಿತ್ಯದ ಸ್ವರೂಪ ಮತ್ತು ಮಹತ್ವ.

3) ಪಂಪನ ವಿಕ್ರಮಾರ್ಜುನ ವಿಜಯದ ಸಂಕ್ಷಿಪ್ತ ಪರಿಚಯ.

4) ಜಾನಪದ ಸಾಹಿತ್ಯದ ಲಕ್ಷಣಗಳು.

ಆ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2×5=10)

ಕವಿರಾಜಮಾರ್ಗ, ರನ್ನ, ಭವಾವಳಿ, ದುರ್ಗಸಿಂಹ.

ಇ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2×10=20)

1) ಕನ್ನಡ ಸಾಹಿತ್ಯ ಚರಿತ್ರೆಯ ಪ್ರಾಚೀನತೆಯನ್ನು ನಿರೂಪಿಸುವ ಆಧಾರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.

2) ಹತ್ತನೆಯ ಶತಮಾನವನ್ನು 'ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸುವರ್ಣಯುಗ' ಎಂದು ಕರೆಯಲು ಕಾರಣಗಳಾವುವು ? ವಿವರಿಸಿ.

3) ಕವಿರಾಜಮಾರ್ಗದ ವೈಶಿಷ್ಟ್ಯತೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿ.

4) ಹಲ್ಮಿಡಿ ಶಾಸನದ ಚಾರಿತ್ರಿಕ ಮತ್ತು ಭಾಷಿಕ ಅಂಶಗಳನ್ನು ವಿವರಿಸಿ.

II. ಅ) ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ : (2×5=10)

ಜೇಡರದಾಸಿಮಯ್ಯ, ರಾಘವಾಂಕ, ಕೀರ್ತನ ಸಾಹಿತ್ಯ, ಶಿಶುನಾಳ ಶರೀಫ.

ಆ) ಇವುಗಳಲ್ಲಿ ಒಂದಕ್ಕೆ ವಿವರವಾದ ಉತ್ತರ ಬರೆಯಿರಿ : (1×10=10)

1) ವಚನ ಸಾಹಿತ್ಯದ ಉಗಮ, ವಿಕಾಸ ಮತ್ತು ಲಕ್ಷಣಗಳನ್ನು ಪರಿಚಯಿಸಿ.

2) ಷಟ್ಪದಿ ಮತ್ತು ರಗಳೆ ಇವುಗಳಲ್ಲಿ ಒಂದರ ಸ್ವರೂಪ ಮತ್ತು ಲಕ್ಷಣಗಳನ್ನು ಪರಿಚಯಿಸಿ.

III. ಅ) ಇವುಗಳಲ್ಲಿ ಎರಡಕ್ಕೆ ಟಿಪ್ಪಣಿ ಬರೆಯಿರಿ : (2×5=10)

ಶಿವಬ್ರಾಹ್ಮಣ, ಕೃತಿಕೆ, ಕಣ್ಣಪ್ಪನ ಬೇಟೆ, ಪಂಡಿತೆ.

ಆ) ಇವುಗಳಲ್ಲಿ ಒಂದಕ್ಕೆ ವಿವರವಾದ ಉತ್ತರ ಬರೆಯಿರಿ : (1×10=10)

1) ಪಂಪನ ಆದಿಪುರಾಣವು ಸಂಸಾರದ ನಶ್ವರತೆಯನ್ನು ಹೇಳುತ್ತಲೆ ಬದುಕಿನ ಸಾರ್ಥಕತೆಯನ್ನು ತೋರುವ ಬಗೆಯನ್ನು ವಿವರಿಸಿ.

2) ಶ್ರೇಷ್ಠವಾದುದೆಲ್ಲಾ ರಾಜನಿಗೆ ಸೇರಬೇಕೆಂಬ ಚಿಂತನೆ 'ಕಾರ್ತಿಕ ಋಷಿಯ ಕತೆಯಲ್ಲಿ' ಮೂಡಿಬಂದ ಬಗೆ ಹೇಗೆ ?

ಪು.ತಿ.ನೋ.

Scanned by CamScanner

(2×5=10)

IV. ಅ) ಇವುಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ :

1) ಕನಕದಾಸರ ಕೀರ್ತನೆಯಲ್ಲಿ ನಿರೂಪಿತವಾಗಿರುವ ಭಕ್ತನ ಡಾಂಭಿಕತೆ.

2) ಬಿಲ್ಲೇಶ ಬೊಮ್ಮಯ್ಯನು ಸಾಲಿಗರಿಂದ ತಪ್ಪಿಸಿಕೊಳ್ಳಲು ಆಡಿದ ನಾಟಕ.

3) ಅಮುಗೆಯ ರಾಯಮ್ಮ ಮತ್ತು ಆಯ್ದಕ್ಕಿ ಲಕ್ಕಮ್ಮನ ವಚನಗಳಲ್ಲಿನ ಡಾಂಭಿಕ ಭಕ್ತಿಯ ಸ್ವರೂಪ.

4) ನಂಜುಂಡ ಕವಿಯು ಕಟ್ಟಿಕೊಟ್ಟಿರುವ ಕನ್ನಡ ನಾಡಿನ ಪ್ರಾಕೃತಿಕ ಸೌಂದರ್ಯದ ವರ್ಣನೆ.

(1×10=10)

ಆ) ಇವುಗಳಲ್ಲಿ ಒಂದಕ್ಕೆ ವಿವರವಾಗಿ ಉತ್ತರಿಸಿ :

1) ಕುಮಾರವ್ಯಾಸನ ಷಟ್ಪದಿಯಲ್ಲಿ ಮೂಡಿಬಂದಿರುವ ಕಾವ್ಯ ಮೀಮಾಂಸೆಯ ಸ್ವರೂಪವನ್ನು ವಿವರಿಸಿ.

2) ಸಿದ್ಧರಾಮನು 'ಬಿಲ್ಲೇಶ ಬೊಮ್ಮಯ್ಯನ' ಸಾಲವನ್ನು ತೀರಿಸಿದ ಪ್ರಸಂಗದ ಸ್ವಾರಸ್ಯವನ್ನು ನಿರೂಪಿಸಿ.

---

Scanned by CamScanner